# ಚೆಕ್‌ಲಿಸ್ಟ್‌ನ ನಮೂನೆ – 5

1995 ಪೂರ್ವದಲ್ಲಿ ಪ್ರಾರಂಭವಾಗಿರುವ ಖಾಸಗಿ ಡಿ.ಇಡಿ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ ನಿಗಧಿಪಡಿಸಿರುವ ಚೆಕ್‌ಲಿಸ್ಟ್.

| ಕ್ರ. ಸಂ | ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹತೆಗಾಗಿ ನಿಗದಿತ ಷರತ್ತು ಇತ್ಯಾದಿಗಳು | ನಿಗದಿತ ಷರತ್ತು ಇತ್ಯಾದಿಗಳು ಪೂರೈಸಲಾಗಿದೆಯೇ? ಅಥವಾ ಇಲ್ಲವೇ? ಮಾಹಿತಿ ನೀಡಿ ದೃಢೀಕೃತ ದಾಖಲೆ ಒದಗಿಸುವುದು. |
|---|---|---|
| 1 | ಅ) ಖಾಸಗಿ ಡಿ.ಇಡಿ ಕಾಲೇಜಿನ ಹೆಸರು ಮತ್ತು ವಿಳಾಸ | ಶ್ರೀ ಶಿವಯೋಗೀಶ್ವರ ಗ್ರಾಮೀಣ ಶಿಕ್ಷಕರ ತರಬೇತಿ (ಡಿ.ಇಡಿ.) ಕೇಂದ್ರ, ಇಂಚಲ<br>ತಾ: ಸವದತ್ತಿ ಜಿ: ಬೆಳಗಾವಿ |
| | ಆ) ಆಡಳಿತ ಮಂಡಳಿ ಹೆಸರು ಮತ್ತು ವಿಳಸ | ಶ್ರೀ ಶ್ರೀವಾನಂದ ಭಾರತಿ ಶಿಕ್ಷಣ ಸಂಸ್ಥೆ, ಇಂಚಲ. ತಾ: ಸವದತ್ತಿ ಜಿ: ಬೆಳಗಾವಿ |
| | ಇ) ಆಡಳಿತ ಮಂಡಳಿ ವರ್ಗ | ಸಾಮಾನ್ಯವರ್ಗ |
| 2 | ಅ) ಖಾಸಗಿ ಡಿ.ಇಡಿ ಕಾಲೇಜು ಪ್ರಾರಂಭಿಸಲು ಮಂಜೂರಾತಿ ನೀಡಿದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ | ED.23.PTI-87 Date 3RD July 1987<br>ED.23.PTI.87 Date 4th August 1987<br>ಆಯುಕ್ತರ ಸಂಖ್ಯೆ: ಶಿತ4–ಪ್ರಾರಂಭ–2:87–88 ದಿನಾಂಕ 01-01-1988 |
| | ಆ) ಎನ್ ಸಿ ಟಿ ಇ ಮಾನ್ಯತೆ ಆದೇಶ ಸಂಖ್ಯೆ ಮತ್ತು ದಿನಾಂಕ | NCTE Rectification of Recognition. Date 03-09-1996 |
| | (ಆದೇಶದ ಪ್ರತಿಗಳನ್ನು ಲಗತ್ತಿಸಿ) | ಆದೇಶದ ಪ್ರತಿಗಳನ್ನು ಲಗತ್ತಿಸಿದೆ. |
| 3 | ಪ್ರಾರಂಭವಾದ ವರ್ಷ, ತಿಂಗಳು ಮತ್ತು ದಿನಾಂಕ | 25-08-1987 |
| 4 | ಅ) ಸರ್ಕಾರ / ಎನ್ ಸಿ ಟಿ ಇ ನಿಗದಿಗೊಳಿಸಿದ ದಾಖಲಾತಿ ಮಿತಿ ಮತ್ತು ವಿಭಾಗಗಳ ಸಂಖ್ಯೆ<br>ಆ) ಬೋಧನಾ ಮಾಧ್ಯಮ<br>(ಕನ್ನಡ /ಆಂಗ್ಲ/ಮರಾಠಿ/ಉರ್ದು/ಇತ್ಯಾದಿ) | ದಾಖಲಾತಿ ಮಿತಿ –100<br>ವಿಭಾಗಗಳು – 02<br>ಮಾಧ್ಯಮ – ಕನ್ನಡ |
| 5 | ಅ) ಸದರಿ ಡಿ.ಇಡಿ ಕಾಲೇಜನ್ನು ನಿಗಧಿತ ನಿಯಮಗಳ ಪ್ರಕಾರ ನೋಂದಾಯಿಸಲಾಗಿದೆಯೇ? | ನೊಂದಾಯಿಸಿದೆ. |
| | ಆ) ಆಡಳಿತ ಮಂಡಳಿಯ ಅಧ್ಯಕ್ಷರು ಕಾರ್ಯದರ್ಶಿ ಮತ್ತು ಸದಸ್ಯರನ್ನು ಒಳಗೊಂಡ ಆಡಳಿತ ಮಂಡಳಿ ಸದಸ್ಯರ ಇತ್ತೀಚಿನ ಪಟ್ಟಿ ಹಾಗೂ ಪಿ.ಟಿ.ಆರ್ (Present Term Renewal) ದೃಢೀಕೃತ ಪ್ರತಿ(ನೊಂದಾವಣೆ ಅಧಿಕಾರಿಯಿಂದ ಪಡೆದಿರುವುದನ್ನು ಲಗತ್ತಿಸತಕ್ಕದು ) | ಲಗತ್ತಿಸಲಾಗಿದೆ. |

| | | |
|---|---|---|
| 6 | ಆಡಳಿತ ಮಂಡಳಿಯಲ್ಲಿ ವಿವಾದವಿದೆಯೇ? | ಇಲ್ಲಾ – ಪ್ರಮಾಣ ಪತ್ರ ಲಗತ್ತಿಸಲಾಗಿದೆ. |
| 7 | ಅ) ನಿಯಮ ರೀತ್ಯಾ ಇಡಬೇಕಾದ ಸ್ಥಿರ/ಕಾಯ್ದಿಟ್ಟ ನಿಧಿ ಹಣವನ್ನು ಠೇವಣಿ ಇಡಲಾಗಿದೆಯೇ?<br>ಆ) ಎನ್ ಸಿ ಟಿ ಇ ಮತ್ತು ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಠೇವಣಿಗಳನ್ನು ಇಡಲಾಗಿದೆಯೇ? (ದೃಢೀಕೃತ ದಾಖಲೆ ಒದಗಿಸತಕ್ಕದ್ದು) (ಸ್ಥಿರ ನಿಧಿ ಠೇವಣಿಯಲ್ಲಿ ವಿನಾಯಿತಿ ಸರ್ಕಾರದಿಂದ ದೊರೆತಿದ್ದಲ್ಲಿ ಆದೇಶ ಪ್ರತಿ ಒದಗಿಸುವುದು) | ಇಡಲಾಗಿರುತ್ತದೆ.<br>* A/c No.11120108495 Date:20-12-2006 5 Lakh Rupees-SBI, Branch Bailhongal<br>* A/c No.11120108508 Date:20-12-2006 3 Lakh Rupees-SBI, Branch Bailhongal<br>ಒಟ್ಟು 8 ಲಕ್ಷ ರೂಪಾಯಿಗಳು<br>ಆ) ಜಂಟಿ ಖಾತೆಯಲ್ಲಿ ಇಡಲಾಗಿದೆ.<br>ಪ್ರತಿಗಳನ್ನು ಲಗತ್ತಿಸಲಾಗಿದೆ |
| 8 | ಚೆಕ್‌ಲಿಸ್ಟ್‌ನ ನಮೂನೆ-2ರಲ್ಲಿ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಮಾಹಿತಿ ನೀಡಿ, ಪಡೆದಿರುವ ಅಂಕಗಳು ಎಷ್ಟು? | 91 |
| 9 | ಅ) ಸದರಿ ಡಿ.ಇಡಿ ಕಾಲೇಜಿಗೆ ಸಂಬಂಧಿಸಿದಂತೆ ಬೋಧಕ / ಬೋಧಕೇತರ ಸಿಬ್ಬಂಧಿಯನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು. (ಅನುದಾನ ಇಲ್ಲದ ಖಾಸಗಿ ಪ್ರಾಥಮಿಕ & ಪ್ರೌಢಶಾಲೆಗಳ ಹಾಗೂ ಡಿ.ಇಡಿ. ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಶರತ್ತು & ನಿಬಂಧನೆಗಳು) ನಿಯಮಗಳು 2005 ರ ಅನ್ವಯ ನಿಗದಿಪಡಿಸಿದ ಸೇವಾ ಸೌಲಭ್ಯಗಳನ್ನು / ಶರತ್ತುಗಳನ್ನು ನೀಡಲಾಗಿದೆಯೇ ?<br>ಆ) ಸದರಿ ನಿಯಮಗಳ ನಿಯಮ 5 ರಂತೆ ಉಚಿತ ನೇಮಕಾತಿ ಆದೇಶವನ್ನು ನೀಡಲಾಗಿದೆಯೇ ? ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಹಾಗೂ Shedule of Employment ಇವುಗಳನ್ನು ನಿರ್ವಹಿಸಲಾಗಿದೆಯೇ ?<br>ಇ) ಸದರಿ ನಿಯಮಗಳ ನಿಯಮ 6 ರ ಅನ್ವಯ ನಿಷೇಧಿಸಿದಂತೆ, ನೇಮಕಾತಿ ಸಮಯದಲ್ಲಿಯೇ ಯಾವುದೇ ದಿನಾಂಕ ನಮೂದಿಸದೆ ರಾಜಿನಾಮೆ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ನೌಕರನನ್ನು ಒತ್ತಾಯಿಸದಿರುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ) ಖಚಿತ ಪಡಿಸಿಕೊಂಡಿದ್ದಾರೆಯೇ?<br>ಈ) ಕರ್ನಾಟಕ ಶಿಕ್ಷಣ ಅಧಿನಿಯಮ, 1983 ರ ಸೆಕ್ಷನ 92 ರ ಅನ್ವಯ, ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು ಅದರ ಅನ್ವಯ ವಿಚಾರಣೆ ನಡೆಸದೆ, ಸೇವೆಯಿಂದ ವಜಾ ಮಾಡಲು ಅಥವಾ ತೆಗೆದುಹಾಕಲು ಬರುವದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಆಡಳಿತ ಮಂಡಳಿ ಅದರ ನೌಕರನ ವಿರುದ್ಧ ಕ್ರಮ ತೆಗೆದು ಕೊಂಡಿದೆಯೇ ? | ಹೌದು.<br>ವಿವರ ಲಗತ್ತಿಸಿದೆ.<br>ಉಚಿತ ನೇಮಕಾತಿ ಆದೇಶ ನೀಡಲಾಗಿರುತ್ತದೆ.<br>ಪ್ರತಿಗಳನ್ನು ಲಗತ್ತಿಸಿದೆ.<br>ಸೇವಾ ಪುಸ್ತಕಗಳನ್ನು ನಿರ್ವಹಿಸಲಾಗಿದೆ.<br>ರಾಜಿನಾಮೆ ಪತ್ರ ಕುರಿತು ಯಾರನ್ನು ಒತ್ತಾಯಿಸಲಾಗಿಲ್ಲ.<br>ಖಚಿತಪಡಿಸಿಕೊಳ್ಳಲಾಗಿದೆ.<br>ಪ್ರಮಾಣ ಪತ್ರ ಲಗತ್ತಿಸಲಾಗಿದೆ.<br>ಇಲ್ಲಾ<br>ಪ್ರಮಾಣ ಪತ್ರ ಲಗತ್ತಿಸಲಾಗಿದೆ. |
| 10 | ಸದರಿ ಡಿ.ಇಡಿ. ಕಾಲೇಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ ; 1995 ರ ಪೂರ್ವದಲ್ಲಿ (1994-95 ನೇ ಶೈಕ್ಷಣಿಕ ಸಾಲಿನ ಅವಧಿಗೆ ಮೊದಲೇ ಪ್ರಾರಂಭವಾಗಿದೆಯೇ ? ) | ಹೌದು. ಆದೇಶದ ಪ್ರತಿ ಲಗತ್ತಿಸಿದೆ.<br>ಪ್ರಾರಂಭದ ಶೈಕ್ಷಣಿಕ ವರ್ಷ 1987-88 |

| | | |
|---|---|---|
| 11 | ಅ) ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಡಿ.ಇಡಿ. ಕಾಲೇಜುಗಳನ್ನು ಮದ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಸಲಾಗಿದೆಯೇ ?<br>ಆ) ಸದರಿ ಡಿ.ಇಡಿ. ಕಾಲೇಜು ಪ್ರಾರಂಭವಾದ ವರ್ಷದಿಂದ ಕಳೆದ ವರ್ಷದವರೆಗಿನ ವಿದ್ಯಾರ್ಥಿಗಳನ್ನು ಪ್ರಥಮ / ದ್ವಿತೀಯ ಡಿ.ಇಡಿ. ಪರೀಕ್ಷೆಗೆ ವಿಚ್ಛಿನ್ನತೆ ಇಲ್ಲದೆ ಸತತವಾಗಿ ಕೂರಿಸಿರುವ ವಿವರಗಳನ್ನು ಒದಗಿಸಲಾಗಿದೆಯೇ ? | ಸತತವಾಗಿ ನಡೆಸಲಾಗುತ್ತಿದೆ.<br><br>ಪ್ರಮಾಣ ಪತ್ರ ಲಗತ್ತಿಸಲಾಗಿದೆ.<br><br>ಪ್ರಾರಂಭದಿಂದ ಇಲ್ಲಿಯವರೆಗೆ ಸತತವಾಗಿ ವಿದ್ಯಾರ್ಥಿಗಳೆಲ್ಲರು ಪರೀಕ್ಷೆಗೆ ಕುಳಿತುಕೊಂಡಿರುವ ಬಗ್ಗೆ ದಾಖಲೆಗಳಿರುತ್ತವೆ. ಲಗತ್ತಿಸಿದೆ. |
| 12 | ಸಂಬಂಧಿಸಿದ ಡಿ.ಇಡಿ ಕಾಲೇಜು ನೊಂದಣಿಯಾಗಿದೆಯೇ? & ಸಹಾಯಾನುದಾನ ನೀಡುವ ದಿನಾಂಕದಿಂದ ಮಾನ್ಯತೆಯನ್ನು ಪಡೆದಿದೆಯೇ ?<br>ಟಿಪ್ಪಣಿ : ಆದಾಗ್ಯೂ ಹಾಗಿಲ್ಲದಿದ್ದಲ್ಲಿ ಸಂಬಂಧಿಸಿದ ಡಿ.ಇಡಿ. ಕಾಲೇಜು ಸತತವಾಗಿ ನಡೆದಿದ್ದು, ಸಕಾರಣಕ್ಕಾಗಿ ಹಿಂದಿನ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದೆ ಇದ್ದರೂ ಪ್ರಸ್ತುತ (ಅಂದರೆ ಇತ್ತೀಚಿನ) ಮಾನ್ಯತೆ ಪಡೆದಿದ್ದಲ್ಲಿ ಅದರ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು. ಈ ಕುರಿತು ವಿವರಗಳನ್ನು ಒದಗಿಸುವದು. | ನೊಂದಣಿಯಾದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಯಾಗಿರುತ್ತದೆ.<br><br>ಪ್ರತಿವರ್ಷ ನವೀಕರಣ ಪ್ರಸ್ತಾವಣೆ ಸಲ್ಲಿಸಲಾಗಿರುತ್ತದೆ.<br><br>ಕ್ರ.ಸಂ. 2 ರಲ್ಲಿ ನವೀಕರಣದ ಎಲ್ಲಾ ಆದೇಶದ ಪ್ರತಿಗಳನ್ನು ಲಗತ್ತಿಸಲಾಗಿದೆ. |
| 13 | ದಾಖಲೆಯಲ್ಲಿ ಮಿಸಲಾತಿಗೆ ಸಂಬಂಧಿಸದಂತೆ ಸರಕಾರದ ಆದೇಶ ಇಡಿ 233 ಪಿಟಿಆಯ್ 2006 ದಿನಾಂಕ : 14-09-2007 & ಡಿ.ಇಡಿ ಕೋರ್ಸಿನ ದಾಖಲಾತಿ ನಿಯಮಗಳಂತೆ ಸರಕಾರ ನಿಗದಿಪಡಿಸಿದ ಶೇಕಡಾವಾರಿನ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ & ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ದಾಖಲಾತಿಯಲ್ಲಿ ಪ್ರಾತಿನಿಧ್ಯತೆಯನ್ನು ನೀಡಲಾಗಿದೆಯೇ? | ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಮಿಸಲಾತಿಗೆ ಸಂಬಂಧಿಸಿದಂತೆ ಪ್ರಾತಿನಿಧ್ಯ ನೀಡಲಾಗಿರುತ್ತದೆ. ವಿವರ ಲಗತ್ತಿಸಿದೆ. |
| 14 | ಕಾಲೇಜಿನ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದವಾತಾವರಣವನ್ನು ಹೊಂದಿದೆಯೇ? | ಹೌದು |
| 15 | ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದಂತೆ ನಮೂನೆ -4ರ ಚೆಕ್‌ಲಿಸ್ಟ್ ನಲ್ಲಿ ವಿವರಗಳನ್ನು ನೀಡಲಾಗಿದೆಯೇ ? | ಹೌದು |
| 16 | ಸರಕಾರ ನಿಗದಿಪಡಿಸಿರುಂತೆ ಮೊದಲ ಸಿಬ್ಬಂಧಿಯನ್ವಯ ನೇಮಕಾತಿ ಮಾಡಿಕೊಂಡಿದೆಯೇ ? ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಟ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರುತ್ತದೆಯೇ ? ಪ್ರತಿಯೊಂದು ಸಂಯೋಜನೆಯಲ್ಲಿ ಕನಿಷ್ಟ ಶೇಕಡಾ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿ ಇರುತ್ತದೆಯೇ ? ನಿಯಮಗಳಲ್ಲಿ ನಿಗದಿಪಡಿಸಿರುವ ಸಿಬ್ಬಂಧಿ ಮಾದರಿ ಅನ್ವಯ ವಿಷಯವಾರು ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆಯೇ ? | ಇತ್ತೀಚಿನ 5 ವರ್ಷಗಳ ದಾಖಲಾತಿ / ಹಾಜರಾತಿ ವಿವರಗಳು- ಲಗತ್ತಿಸಿದೆ.<br>ಪ್ರಥಮ ಡಿ.ಇಡಿ.<br>ವರ್ಷ \| ದಾಖಲಾತಿ \| ಹಾಜರಾತಿ<br>1 \| 2 \| 3<br>ದ್ವಿತೀಯ ಡಿ.ಇಡಿ.<br>ವರ್ಷ \| ದಾಖಲಾತಿ \| ಹಾಜರಾತಿ<br>1 \| 2 \| 3<br>ನೇಮಕಾತಿ ಮಾಡಿಕೊಂಡಿರುತ್ತಾರೆ. |
| 17 | ಸರಕಾರದ ಮಿಸಲಾತಿ ಆದೇಶಗಳನ್ವಯ ನಿಗದಿಪಡಿಸಿದ 100 ಬಿಂದುಗಳ ಮಿಸಲಾತಿ ರೋಸ್ಟರಿನ ಪ್ರಕಾರ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ಕ್ಕೆ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರ ಸಾಕಷ್ಟು ಪ್ರಾತಿನಿಧ್ಯತೆ ಇದೇಯೇ ? | ಪ್ರಾತಿನಿಧ್ಯ ನೀಡಲಾಗಿದೆ. |

| | | |
|---|---|---|
| 18 | ಖಾಸಗಿ ಡಿ.ಇಡಿ. ಕಾಲೇಜು ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಉಪನ್ಯಾಸಕರು & ನೌಕರರು ಎನ್ ಸಿ ಟಿ ಇ ನಿಯಮಗಳಂತೆ ಡಿ.ಇಡಿ. ಕಾಲೇಜುಗಳಲ್ಲಿನ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ & ಇತರೆ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರುತ್ತಾರೆಯೇ ? | ಹೊಂದಿರುತ್ತಾರೆ.<br>ಸಿಬ್ಬಂಧಿಯ ವಿದ್ಯಾರ್ಹತೆಯ ಪ್ರಮಾಣ ಪತ್ರದ ಪ್ರತಿಗಳನ್ನು ಲಗತ್ತಿಸಲಾಗಿದೆ. |
| 19 | ಪ್ರತಿಯೊಂದು ನೇಮಕಾತಿ ಮಾಡುವಾಗ ಪತ್ರಿಕಾ ಪ್ರಕಟಣೆ ನೀಡಲಾಗಿದೆಯೇ ? ಸಂಬಂಧಿಸಿದ ಪತ್ರಿಕೆಯ ಮೂಲ ದಾಖಲಾತಿಯನ್ನು ಒದಗಿಸಲಾಗಿದೆಯೇ ? | ಹೌದು<br>ಲಗತ್ತಿಸಲಾಗಿದೆ. |
| 20 | ಈ ಸಂಸ್ಥೆಗಳಲ್ಲಿ ಮಾಡಿಕೊಂಡ ನೇಮಕಾತಿಗಳಿಗಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆಯೇ ? ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆ ಆಗದಿದ್ದಲ್ಲಿ ಪ್ರಸ್ತುತ ನೇಮಕಾತಿಗಳಿಗೆ ಸಂಬಂಧಿಸಿದಂತೆ ರಚಿಸಿರುವ ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ. ಸದರಿ ನೇಮಕಾತಿಗಳಿಗೆ. ಸದರಿ ಸಮಿತಿ ಅನುಮೋದನೆ ಪಡೆದು ನಂತರ ನೇಮಕಾತಿ ಅನುಮೋದನಾ ಆದೇಶವನ್ನು ಹೊರಡಿಸಲಾಗಿದೆಯೇ ? | ಲಗತ್ತಿಸಿದೆ. |
| 21 | ನಿಗದಿತ ಸಿಬ್ಬಂಧಿ ಮಾದರಿಯಂತೆ ("ಡಿ." ಗುಂಪು ನೌಕರರನ್ನು ಹೊರತುಪಡಿಸಿ) ಎಲ್ಲಾ ಸಿಬ್ಬಂದಿಗಳನ್ನು ನೇಮಕ ಮಾಡಿದ್ದರೆ ಮಾತ್ರ ಜಿಲ್ಲಾ ಪರಿಶೀಲನಾ ಸಮಿತಿ ಪರಿಗಣಿಸಿ ಅನುಮೋದಿಸತಕ್ಕದ್ದು. ಈ ಅಂಶವನ್ನು ಪರಿಶೀಲಿಸಲಾಗಿದೆಯೇ ? | ಹೌದು |
| 22 | ಜಿಲ್ಲಾ ಪರಿಶೀಲನಾ ಸಮಿತಿ ಸಹಾಯಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆಯೇ ? | ಹೌದು |
| 23 | ನಿಗದಿತ ಸಿಬ್ಬಂಧಿ ಮಾದರಿ & ನೇಮಕಾತಿ ಕಾರ್ಯವಿಧಾನದನ್ವಯ ನೇಮಕಾತಿಯಲ್ಲಿ ಮಿಸಲಾತಿಯನ್ನು ಪಾಲಿಸಲಾಗಿದೆಯೇ ?<br>ಟಿಪ್ಪಣಿ: ಆದಾಗ್ಯೂ ದಿನಾಂಕ : 01-06-1992 ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮಿಸಲಾತಿ ಆದೇಶಗಳ ಉಲ್ಲಂಘನೆಯನ್ನು ದಿನಾಂಕ : 21-04-1995 ರ ಸರಕಾರದ ಆದೇಶ ಸಂಖ್ಯೆ : ಇಡಿ 227 ಎಸ್.ಇ.ಪಿ. 94 ರ ಅನ್ವಯ ಮನ್ನಾ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ದಿನಾಂಕ: 22-01-1996 ರ ಸುತ್ತೋಲೆ ಸಂಖ್ಯೆ ಇಡಿ 237 ಟಿಪಿಯು 95 ರ ಮೂಲಕ ವಿದಿಸಿದ ಷರತ್ತುಗಳನ್ನು ಪೂರೈಸಿದ್ದಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಆದ ನಷ್ಟವನ್ನು ಬ್ಯಾಕ್ ಲಾಗ್ ಎಂದು ಪರಿಗಣಿಸಿ ಮುಂದಿನ ನೇಮಕಾತಿಗಳಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಅವರ ಪ್ರಾತಿನಿಧ್ಯತೆಯನ್ನು ಸರಿದುಗಿಸಿಕೊಳ್ಳತಕ್ಕದ್ದೆಂಬ ಷರತ್ತನ್ನು ದಿನಾಂಕ 21-04- | ಪರಿಶೀಲಿಸಿದೆ.<br>ಸಿಬ್ಬಂಧಿ ಮಾದರಿ ರಚನೆ & ಮಿಸಲಾತಿ ವಿವರ ಲಗತ್ತಿಸಿದೆ. |

<table>
<tr><th></th><th></th><th></th></tr>
<tr><td></td><td>1995 ರ ಸದರಿ ಆದೇಶದನ್ವಯ ವಿಧಿಸಲಾಗಿದೆ. ಆದರೆ, ದಿನಾಂಕ 20-06-1995 ರ ಸರಕಾರದ ಆದೇಶ ಸಂಖ್ಯೆ ಸಿ.ಆ.ಸು.ಇ. 8 ಸೆ.ಹಿ.ಮ. 95 ರ ಕಂಡಿಕೆ-12 (iii)ರ ಅನ್ವಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೇಮಕಾತಿಯಲ್ಲಿ ಮಿಸಲಾತಿ ಅನ್ವಯಿಸುವದಿಲ್ಲ. ದಿನಾಂಕ 01-06-1987 ರಿಂದ 1992-93 ನೇ ಶೈಕ್ಷಣಿಕ ಸಾಲಿನ ವರೆಗಿನ ಪ್ರಾರಂಭಿಸಿದ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಡಿ.ಇಡಿ. ಕಾಲೇಜುಗಳಿಗೆ ಸಂಬಂಧಿಸಿದಂತೆ ಅನುದಾನರಹಿತ ಅವಧಿಯಲ್ಲಿ ಮಿಸಲಾತಿ ರೋಸ್ಟರ್ ನ್ನು ಅನುಸರಿಸದೇ ಇದ್ದಲ್ಲಿ ಅದರ ಪರಿಣಾಮವಾಗಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ & ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯಯಲ್ಲಿ ಉಂಟಾದ ಕೊರತೆಯನ್ನು ನೇರನೇಮಕಾತಿಯ ಮಂದಿನ ಸಂದರ್ಭಗಳಲ್ಲಿ ಸರಿದೂಗಿಸತಕ್ಕದ್ದು.</td><td></td></tr>
<tr><td>24</td><td>ಸಂಬಂಧಿಸಿದ ಡಿ.ಇಡಿ. ಕಾಲೇಜಿನ ದ್ವಿತೀಯ ಡಿ.ಇಡಿ. ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 5 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇದೆಯೇ ? ಆದಾಗ್ಯೂ, ಈ ಷರತ್ತನ್ನು ಪೂರೈಸದೇ ಇರುವ ಪ್ರಕರಣಗಳಲ್ಲಿ ಸಂಬಂಧಿಸಿದ ಡಿ.ಇಡಿ. ಕಾಲೇಜನ್ನು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಶೀಲಿಸಿ, ಸಹಾಯಾನುದಾನಕ್ಕೆ ಒಳಪಡಿಸಿದ ಮೂರನೇ ವರ್ಷದಿಂದ ಅನ್ವಯಿಸುವದು. ಅಂದರೆ ಅಂತಹ ಪ್ರಕರಣಗಳಲ್ಲಿ ಸಹಾಯಾನುದಾನಕ್ಕೆ ಒಳಪಡಿಸಿದ ಮೂರನೇ ವರ್ಷದ ಅಂತ್ಯದಲ್ಲೂ ದ್ವಿತೀಯ ಡಿ.ಇಡಿ. ಪರಿಕ್ಷೆಯ ಮೇಲಿನಂತೆ ನಿಗದಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೆ ಇದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವದು ಎನ್ನುವ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವದು.</td><td>ಪ್ರತಿ ವರ್ಷದ ಫಲಿತಾಂಶವು ಅತ್ಯುತ್ತಮವಾಗಿರುತ್ತದೆ.<br><br>ಪ್ರಾರಂಭದಿಂದ ಇಲ್ಲಿಯವರೆಗಿನ ಫಲಿತಾಂಶದ ವಿವರ ಲಗತ್ತಿಸಿದೆ.</td></tr>
<tr><td>25</td><td>ರಾಜ್ಯದಲ್ಲಿನ ಡಿ.ಡಿ. ಕಾಲೇಜುಗಳಿಗೆ ಅನ್ವಯವಾಗುವ ಸಿಬ್ಬಂಧಿ ಮಾದರಿ ರಚನೆಯನ್ನು ಸರಕಾರದ ಅಧಿಸೂಚನೆ ಸಂಖ್ಯೆ ಇಡಿ 6 ವಿವಿಧ 2001 ದಿನಾಂಕ 12-10-2001 & ಎನ್ ಸಿ ಟಿ ಇ ನಿಯಮಗಳನ್ವಯ ಪರಿಶೀಲಿಸುವದು.</td><td>ಕೆಲಸ ನಿರ್ವಹಿಸುತ್ತಿರುವ ನೌಕರರ ವಿವರ<br><table><tr><th>ಕ್ರ ಸಂ.</th><th>ನೌಕರರ ಹೆಸರು & ಪದನಾಮ</th><th>ಜನ್ಮ ದಿನಾಂಕ</th><th>ನೇಮಕಾತಿ ದಿನಾಂಕ</th><th>ಹಾಜರಾತಿ ದಿನಾಂಕ</th><th>ಯಾವ ಮೀಸಲಾತಿ ವರ್ಗಕ್ಕೆ ಸೇರಿದವರು</th></tr><tr><td></td><td></td><td></td><td></td><td></td><td></td></tr></table><br>ಪಟ್ಟಿ ಲಗತ್ತಿಸಿದೆ.</td></tr>
</table>

ಪರಿಶೀಲನಾ ಅಧಿಕಾರಿಗಳ ಸಹಿ

[illegible] (ಅಧಿ[illegible])

[illegible] ಮತ್ತು ಪದನಾಮ [illegible]

[illegible]